## **<u>ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಜೇವರ್ಗಿ.</u>**

**<u>ಸಿ.ಸಿ.ನಂ.661/2022</u>**

ಪಿರ್ಯಾದಿದಾರರುಃ ಯಡ್ರಾಮಿ ಪೊಲೀಸ್ ಠಾಣೆ.

**ವಿರುದ್ಧ**

**ಆರೋಪಿತರುಃ**

1. ವೀಣಾ ಗಂಡ ಗುರುರಾಜ ಹುರಗಡ್ಲಿ
   ವಃ 49 ವರ್ಷ, ಉದ್ಯೋಗಃ ಕೂಲಿ,
   ಸಾಃ ಗೋಲಗೇರಿ, ತಾಃ ಸಿಂಧಗಿ, ಜಿಃ ವಿಜಯಪೂರ

2. ಹಣಮಂತ ತಂದೆ ಮರೇಪ್ಪ ಯಂಟಮಾನ,
   ವ: 55 ವರ್ಷ, ಉದ್ಯೋಗಃ ಒಕ್ಕಲುತನ,
   ಸಾಃ ಹೊನ್ನಳ್ಳಿ, ತಾಃ ಸಿಂಧಗಿ, ಜಿಃ ವಿಜಯಪೂರ

**<u>ದಂಡ ಪ್ರಕ್ರಿಯಾ ಸಂಹಿತೆ ಕಲಂ 313 ರ ಪ್ರಕಾರ ಆರೋಪಿತರ ಹೇಳಿಕೆಗಳು</u>**

ಪ್ರಃ1: ಈ ಪ್ರಕರಣದಲ್ಲಿರುವ ಸಾಕ್ಷಿಗಳ ಸಾಕ್ಷ್ಯವನ್ನು ಕೇಳಿಸಿಕೊಂಡಿದ್ದಿರಾ ?

ಉಃ 1ನೇ ಆರೋಪಿಃ

2ನೇ ಆರೋಪಿಃ

ಪ್ರಃ2: ಚಾಸಾ-1 ದೇವಕಿ, ಇವರು ತಮ್ಮ ಸಾಕ್ಷ್ಯದಲ್ಲಿ ಏನು ಹೇಳುತ್ತಾರೆಂದರೆ, 16-02 ರಂದು 03 ವರ್ಷಗಳ ಹಿಂದೆ ಬಿರಾಳ ಗ್ರಾಮದ ತನ್ನ ಹೊಲ ಸರ್ವೆ ನಂ.47 ರಲ್ಲಿ 06 ಎಕರೆ, 19 ಗುಂಟೆ ಇದ್ದು, ಆ ದಿನ ಮದ್ಯಾಹ್ನ 12-30 ಗಂಟೆಗೆ ತಾನು, ಚಾಸಾ-4 ಅವರು ಹೊಲಕ್ಕೆ ಹೋದಾಗ, 2ನೇ ಆರೋಪಿ ತನ್ನ ಗಳೆ ಹೊಡೆಯುತ್ತಿದ್ದನು, ತಾನು ಮತ್ತು ಚಾಸಾ-4 ಅವರು ಗಳೆ ಹೊಡೆಯಬೇಡ

ಎಂದು ಹೇಳಿದಾಗ 2ನೇ ಆರೋಪಿತನು ತನಗೆ ಅವಾಚ್ಯ ಶಬ್ದಗಳಿಂದ ಬೈದು, ಚಾಸಾ-4 ಅವರಿಗೆ ರಟ್ಟೆ ಹಿಡಿದು ಎಳೆದಾಡಿರುತ್ತಾನೆ, ಆರೋಪಿತರು ತನಗೆ ಕೊಡಲಿ ಬಡಿಗೆಯಿಂದ ಹೊಡೆದು ಖಲಾಸ ಮಾಡುತ್ತೇವೆಂದು ಜೀವದ ಬೆದರಿಕೆ ಹಾಕಿರುತ್ತಾರೆ, ನಂತರ ತಾನು ಪೊಲೀಸರ ಠಾಣೆಗೆ ಹೋಗಿ ದೂರನ್ನು ಸಲ್ಲಿಸಿರುತ್ತೇನೆಂದು ತಮ್ಮ ಸಾಕ್ಷಿ ನುಡಿಯುತ್ತಾರೆ. ಅದಕ್ಕೆ ನೀವೇನು ಹೇಳುತ್ತಿರಿ?

ಉಃ 1ನೇ ಆರೋಪಿಃ

2ನೇ ಆರೋಪಿಃ

ಪ್ರಃ3: ಚಾಸಾ-3 ಮಹಾಂತಗೌಡ, ಇವರು ತಮ್ಮ ಸಾಕ್ಷ್ಯದಲ್ಲಿ ಏನು ಹೇಳುತ್ತಾರೆಂದರೆ, ತಾನು ಒಂದು ದಾಖಲೆಯನ್ನು ನೋಡುತ್ತಿದ್ದು, ಅದರಲ್ಲಿ ತನ್ನ ಸಹಿ ಇರುತ್ತದೆ, ಸದರಿ ಸಹಿಯನ್ನು 02 ವರ್ಷಗಳ ಹಿಂದೆ ಬಿರಾಳ ಹಿಸ್ಸಾ ಗ್ರಾಮದ ಚಾಸಾ-1 ಅವರಿಗೆ ಸೇರಿದ ಹೊಲ ಸರ್ವೆ ನಂ.47 ರಲ್ಲಿ ಜಗಳದ ವಿಚಾರವಗಿ ಮಾಡಿರುತ್ತೇನೆ, ಚಾಸಾ-1 ಅವರು ತೋರಿಸಿದ ಜಗವನ್ನು ಪೊಲೀಸರು ಮದ್ಯಾಹ್ನ 3-30 ರಿಂದು 4-00 ಗೆಂಟೆಯ ವರೆಗೆ ಪಂಚನಾಮೆ ಮಾಡಿರುತ್ತಾರೆ, ಪಂಚನಾಮೆಯಲ್ಲಿ ಬರೆದ ವಿಚಾರ ಪೊಲೀಸರು ತನಗೆ ಓದಿ ಹೇಳಿರುತ್ತಾರೆಂದು, ತಮ್ಮ ಸಾಕ್ಷಿ ನುಡಿಯುತ್ತಾರೆ. ಅದಕ್ಕೆ ನೀವೇನು ಹೇಳುತ್ತಿರಿ?

ಉಃ 1ನೇ ಆರೋಪಿಃ

2ನೇ ಆರೋಪಿಃ

ಪ್ರಃ4: ಚಾಸಾ-4 ಚಂದ್ರಭಾಗಮ್ಮ, ಇವರು ತಮ್ಮ ಸಾಕ್ಷ್ಯದಲ್ಲಿ ಏನು ಹೇಳುತ್ತಾರೆಂದರೆ, ದಿನಾಂಕ 16-02-2022 ರಂದು ಮದ್ಯಾಹ್ನ 12-00 ಗಂಟೆ ಸಮಯದಲ್ಲಿ ಚಾಸಾ-1 ಅವರು ಹೊಲಕ್ಕೆ ಹೋದಾಗ 1 ಮತ್ತು 2ನೇ ಆರೋಪಿತರು ಗಳೆ ಹೊಡೆಯುತ್ತಿದ್ದರು,

ಆಗ ಚಾಸಾ-1 ಅವರು ಗಳೆಹೊಡೆಯ ಬೇಡಿ ಎಂದು 2ನೇ ಆರೋಪಿಗೆ ಹೇಳಿದಾಗ ಚಾಸಾ-1 ಅವರಿಗೆ ಮಾನಕ್ಕೆ ಕುಂದು ಬರುವ ಹಾಗೆ ಅವಾಚ್ಯ ಶಬ್ದಗಳಿಂದ ಬೈದಿರುತ್ತಾನೆ,1ನೇ ಆರೋಪಿ ಚಾಸಾ-1 ಅವರಿಗೆ ತಳ್ಳಿ ಹೊಡೆದಿರುತ್ತಾನೆ, 2ನೇ ಆರೋಪಿ ಚಾಸಾ-1 ಅವರಿಗೆ ಕೊಡಲಿ ಬಡಿಗೆಯಿಂದ ಹೊಡೆದು ಖಲಾಸ ಮಾಡುತ್ತೇವೆ ಎಂದು ಜೀವದ ಬೆದರಿಕೆ ಹಾಕಿರುತ್ತಾರೆ, ನಂತರ ಅದೇ ದಿನ ಚಾಸಾ-1 ಅವರು ಪೊಲೀಸ ಠಾಣೆಗೆ ಹೋಗಿ ದೂರನ್ನು ನೀಡಿರುತ್ತಾರೆ, ದಿನಾಂಕ 20-02-2022 ರಂದು ಘಟನೆಯ ಕಲುರಿತು ಬಿರಾಳ ಹಿಸ್ಸಾ ಗ್ರಾಮದಲ್ಲಿ ಪೊಲೀಸರ ಮುಂದೆ ಹೇಳಿಕೆ ನೀಡಿರುತ್ತೇನೆ ಎಂದು, ತಮ್ಮ ಸಾಕ್ಷಿ ನುಡಿಯುತ್ತಾರೆ. ಅದಕ್ಕೆ ನೀವೇನು ಹೇಳುತ್ತಿರಿ?

ಉಃ 1ನೇ ಆರೋಪಿಃ

2ನೇ ಆರೋಪಿಃ

ಪ್ರಃ5: ಚಾಸಾ-5 ಗೊಲ್ಲಾಳಪ್ಪ, ಇವರು ತಮ್ಮ ಸಾಕ್ಷ್ಯದಲ್ಲಿ ಏನು ಹೇಳುತ್ತಾರೆಂದರೆ, 03 ವರ್ಷಗಳ ಹಿಂದೆ ಮದ್ಯಾಹ್ನ 12-30 ಗಂಟೆ ಸಮಯದಲ್ಲಿ ಬಿರಾಳ ಹಿಸ್ಸಾ ಗ್ರಾಮದಲ್ಲಿ ಹೊಲದ ವಿಚಾರವಾಗಿ ಆರೋಪಿತರು ಚಾಸಾ-1 ಅವರ ಹೊಲದಲ್ಲಿ ಗಳೆ ಹೊಡೆಯುತ್ತಿದ್ದಾಗ, ಆಗ ಚಾಸಾ-1 ಅವರು ಗಳೆಹೊಡೆಯ ಬೇಡಿ ಎಂದು ಹೇಳಿದಾಗ ಆರೋಪಿತರು ಅವಾಚ್ಯ ಶಬ್ದಗಳಿಂದ ಬೈದು, 1ನೇ ಆರೋಪಿ ಚಾಸಾ-4 ಅವರಿಗೆ ಕೈಹಿಡಿದು ಎಳೆದಾಡಿ ನೂಕಿಸಿಕೊಟ್ಟು, ನಂತರ ಅದೇ ದಿನ ಚಾಸಾ-1 ಅವರು ಪೊಲೀಸ ಠಾಣೆಗೆ ಹೋಗಿ ದೂರನ್ನು ನೀಡಿರುತ್ತಾರೆ, ಆ ಬಗ್ಗೆ ಬಿರಾಳ ಹಿಸ್ಸಾ ಗ್ರಾಮದಲ್ಲಿ ಪೊಲೀಸರ ಮುಂದೆ ಹೇಳಿಕೆ ನೀಡಿರುತ್ತೇನೆ ಎಂದು, ತಮ್ಮ ಸಾಕ್ಷಿ ನುಡಿಯುತ್ತಾರೆ. ಅದಕ್ಕೆ ನೀವೇನು ಹೇಳುತ್ತಿರಿ?

ಉಃ 1ನೇ ಆರೋಪಿಃ

2ನೇ ಆರೋಪಿಃ

ಪ್ರಃ6: ಚಾಸಾ-6 ಅಮರಗೊಂಡ, ಮುಖ್ಯ ಪೇದೆ, ಇವರು ತಮ್ಮ ಸಾಕ್ಷ್ಯದಲ್ಲಿ ಏನು ಹೇಳುತ್ತಾರೆಂದರೆ, ದಿನಾಂಕ 20-02-2022 ರಂದು ಮದ್ಯಾಹ್ನ 01-05 ರ ಸಮಯದಲ್ಲಿ ತಾನು ಕಚೇರಿಯಲ್ಲಿದ್ದಾಗ ಚಾಸಾ-1 ಅವರು ಠಾಣೆಗೆ ಹಾಜರಾಗಿ ನೀಡಿದ ದೂರನ್ನು ಸ್ವೀಕರಿಸಿ ಪ್ರಕರಣವನ್ನು ದಾಖಲಿಸಿಕೊಂಡು ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ, ಅದೇ ದಿನ ಘಟನಾ ಸ್ಥಳಕ್ಕೆ ಬೇಟಿ ನೀಡಿ ಪಂಚರ ಸಮಕ್ಷಮ ಗುನ್ನಾ ಜಾಗೆಯ ಪಂಚನಾಮೆ ಮಾಡಿರುತ್ತೇನೆ, ಅದೇ ದಿನ ಚಾಸಾ-4 ಮತ್ತು 6 ಅವರ ಹೇಳಿಕೆಗಳನ್ನು ಪಡೆದಿರುತ್ತೇನೆ, ದಿನಾಂಕ 02-05-2022 ರಂದು ಆರೋಪಿತರಿಗೆ ಸೂಕ್ತ ಜಾಮೀನಿನ ಮೇಲೆ ಬಿಡುಗಡೆ ಮಾಡಿರುತ್ತೇನೆ, ದಿನಾಂಕ 14-05-2022 ರಂದು ಗುನ್ನಾ ಜಾಗದ ಸರ್ವೆ ನಂ.47 ರ ಪಹಣಿಯನ್ನು ಚಾಸಾ-1 ಅವರಿಂದ ಪಡೆದಿರುತ್ತೇನೆ, ದಿನಾಂಕ 14-05-2022 ರಂದು ತನಿಖೆ ಪೂರ್ಣಗೊಳಿಸಿ ಆರೋಪಿತರ ವಿರುದ್ದ ದೋಷಾರೋಪಣೆ ಪತ್ರವನ್ನು ಸಲ್ಲಿಸಿರುತ್ತೇನೆ ಎಂದು, ತಮ್ಮ ಸಾಕ್ಷಿ ನುಡಿಯುತ್ತಾರೆ. ಅದಕ್ಕೆ ನೀವೇನು ಹೇಳುತ್ತಿರಿ?

ಉಃ 1ನೇ ಆರೋಪಿಃ

2ನೇ ಆರೋಪಿಃ

ಪ್ರಃ7: ಚಾಸಾ-2 ಶಾಂತಗೌಡ, ಇವರು ತಮ್ಮ ಸಾಕ್ಷ್ಯದಲ್ಲಿ ಏನು ಹೇಳುತ್ತಾರೆಂದರೆ, ತಾನು ಒಂದು ದಾಖಲೆಯನ್ನು ನೋಡುತ್ತಿದ್ದು ಅದರಲ್ಲಿ ತನ್ನ ಸಹಿ ಇರುತ್ತದೆ, ಸದರಿ ಸಹಿಯನ್ನು ದಿನಾಂಕ 20-02-2022 ರಂದು ಬಿರಾಳ ಹಿಸ್ಸಾ ಗ್ರಾಮದಲ್ಲಿ ಚಾಸಾ-1 ಅವರಿಗೆ ಸೇರಿದ ಸರ್ವೆ ನಂ.47 ರಲ್ಲಿ ಆರೋಪಿತರ ಮತ್ತು ಚಾಸಾ-1

ಅವರ ಮದ್ಯ ಆದ ಜಗಳ ವಿಚಾರವಾಗಿ ಮಾಡಿರುತ್ತೇನೆ, ಚಾಸಾ-1 ಅವರು ಗುನ್ನಾ ಜಾಗೆಯನ್ನು ಪೊಲೀಸರಿಗೆ ತೋರಿಸಿದ್ದು ಪೊಲೀಸರು ಮದ್ಯಾಹ್ನ 4-30 ರಿಂದು 5-30 ರವರೆಗೆ ಪಂಚನಾಮೆ ಮಾಡಿರುತ್ತಾರೆ ಎಂದು, ತಮ್ಮ ಸಾಕ್ಷಿ ನುಡಿಯುತ್ತಾರೆ. ಅದಕ್ಕೆ ನೀವೇನು ಹೇಳುತ್ತಿರಿ?

ಉಃ 1ನೇ ಆರೋಪಿಃ

2ನೇ ಆರೋಪಿಃ

ಪ್ರಃ8: ಈ ಕೇಸಿನ ಬಗ್ಗೆ ನಿಮಗೆ ಏನಾದರೂ ಹೇಳುವುದು ಇದೆಯೇ?

ಉಃ 1ನೇ ಆರೋಪಿಃ

2ನೇ ಆರೋಪಿಃ

ಪ್ರ-9 ಈ ಕೇಸಿನ ಬಗ್ಗೆ ನಿಮ್ಮ ಪರವಾಗಿ ಸಾಕ್ಷಿ ಮಾಡಿಸಲು ಇಚ್ಛಿಸುವಿರಾ?

ಉಃ 1ನೇ ಆರೋಪಿಃ

2ನೇ ಆರೋಪಿಃ

(ಆರೋಪಿತನ/ರ ಹೇಳಿಕೆಯನ್ನು ಆರೋಪಿತರಿಗೆ/ನಿಗೆ ತಿಳಿಯುವ ಭಾಷೆಯಲ್ಲಿ ಹೇಳಿ ಅವರಿಂದ/ನಿಂದ ಬಂದ ಉತ್ತರವನ್ನು ದಾಖಲಿಸಿಕೊಳ್ಳಲಾಯಿತು)

ದಿಃ 22-01-2026 ಸಿವಿಲ್ ಹಾಗೂ ಪ್ರ ದ ನ್ಯಾ , ದಂಡಾಧಿಕಾರಿಗಳು,

ಜೇವರ್ಗಿ.